# ಕೇಳಿ ತಿಳಿಯಿರಿ

? ಮುಕ್ತಿ ಮಾರ್ಗಕ್ಕೆ ಸುಲಭ ಸಾಧನೆ ಯಾವುದು? — ಪಂಡಿತ್ ಎಚ್. ಶ್ರೀನಿವಾಸಲು, ಬೇತಮಂಗಲ.

☆ ಮುಕ್ತಿ ದುರ್ಲಭವಾದುದು, ಅದಕ್ಕೆ ಸುಲಭವಾದ ಸಾಧನೆ ಎಂಬುದಿಲ್ಲ. ತೀವ್ರ ಮುಕ್ತಿಯ ಬಯಕೆ ಇರುವವರಿಗೆ ತೀವ್ರ ಸಾಧನೆಯ ಮೂಲಕವೇ ಅದು ದೊರೆಯುವಂತಹದು. ತೀವ್ರ ಮುಮುಕ್ಷತ್ವ ಇದ್ದಾಗ ಎಂತಹ ಅಸಾಧ್ಯ ಸಾಧನೆಯೂ ಸುಲಭವಾಗಿಯೇ ನಡೆದುಹೋಗುತ್ತದೆ. ಅಂತಹ ವ್ಯಾಕುಲತೆ ಇದ್ದಾಗ ಸುಲಭ, ಕಠಿಣ ಎಂಬ ಆಲೋಚನೆಯಾಗಲಿ, ಲೆಕ್ಕಾಚಾರವಾಗಲಿ ಇರುವುದಿಲ್ಲ, ಶ್ರಮದ ಬೋಧೆಯಿರುವುದಿಲ್ಲ.

? ರಾಮಕೃಷ್ಣ ಪರಮಹಂಸ ದೇವರು ಹೇಳಿದಂತೆ ಸಂಸಾರಿಗಳ ಮನಸ್ಸು ಒಂದು ಸಾಮಾನ್ಯ ನೊಣದಂತೆ. ಒಮ್ಮೆ ಸಿಹಿ ತಿಂಡಿಯ ಮೇಲೆ ಮತ್ತೊಮ್ಮೆ ತಿಪ್ಪೆಯ ಮೇಲೆ ಕುಳಿತುಕೊಳ್ಳುತ್ತದೆ. ಅದು ಸಿಹಿ ತಿಂಡಿಯ ಮೇಲೆ ಮಾತ್ರ ಕುಳಿತುಕೊಳ್ಳುವಂತೆ ಮಾಡುವುದಕ್ಕೆ ಏನು ಮಾಡುವುದು? — ಎನ್. ಚಂದ್ರಶೇಖರ್, ಮೈಸೂರು.

☆ ನೊಣವು ಸಹಿತಿಂಡಿಯ ಮೇಲೆ ಮಾತ್ರ ಕುಳಿತುಕೊಳ್ಳಬೇಕಾದರೆ ಅದು ಸಿಹಿತಿಂಡಿಯ ಮೇಲೆ ಕುಳಿತಿರುವ ಸಮಯವನ್ನು ಕಾಯ್ದು, ಅದರ ರೆಕ್ಕೆಗಳನ್ನು ಕಿತ್ತುಹಾಕಿಬಿಡಬೇಕು. ಇದನ್ನೇ ಮನಸ್ಸಿಗೆ ಅನ್ವಯಿಸಿದರೆ, ಮನಸ್ಸು ಹೆಚ್ಚು ಹಾರಾಡುವುದನ್ನು ನಿಲ್ಲಿಸಬೇಕು ಎಂದಾಗುತ್ತದೆ. ಅದು ಸಿಹಿ ತಿಂಡಿ ಅಂದರೆ, ಅಧ್ಯಾತ್ಮ ವಿಷಯದಲ್ಲಿ ಮಾತ್ರ ರುಚಿಯನ್ನು ಕಾಣುವಂತೆ ಆಗಬೇಕು. ಮನಸ್ಸಿನ ಹಾರಾಟವನ್ನು ಅಂದರೆ ಚಂಚಲತೆಯನ್ನು ಕಡಿಮೆ ಮಾಡಬೇಕಾದರೆ ಧ್ಯಾನಾಭ್ಯಾಸ ಮಾಡಬೇಕು. ಅದು ಅಧ್ಯಾತ್ಮ ವಿಷಯದಲ್ಲಿ ಮಾತ್ರ ರುಚಿಯನ್ನು ಕಾಣುವಂತಾಗಬೇಕಾದರೆ, ನಾವು ವೈರಾಗ್ಯ ಮನೋಭಾವವನ್ನು ಬೆಳಸಿಕೊಳ್ಳಬೇಕು. ಧ್ಯಾನದಲ್ಲಿ ರುಚಿ, ವಿಷಯಸುಖದಲ್ಲಿ ಅರುಚಿ ಉಂಟಾದರೆ ಆಗ ಮನಸ್ಸೆಂಬ ನೊಣವು ಸಿಹಿತಿಂಡಿಯ ಮೇಲೆ ಮಾತ್ರ ಕುಳಿತುಕೊಳ್ಳುತ್ತದೆ.

ನೊಣವನ್ನು ದುಂಬಿಯಾಗಿ ಪರಿವರ್ತಿಸಬೇಕು. ಆಗ ಅದು ಭಗವತ್ ಚರಣಕಮಲದ ಮಕರಂದವನ್ನು ಮಾತ್ರ ಸವಿಯುತ್ತದೆ. ದುಂಬಿಗಳಲ್ಲಿ ಅಪಾರ ಪರಿಶ್ರಮವನ್ನೂ, ಅದ್ಭುತ ಶಿಸ್ತನ್ನೂ ಕಾಣುತ್ತೇವೆ. ಹಾಗೆಯೇ ನಾವೂ ಪರಿಶ್ರಮಪಟ್ಟರೆ, ಶಿಸ್ತುಬದ್ಧ ಜೀವನ ನಡೆಸಿದರೆ, ಕ್ರಮೇಣ ನೊಣವು ದುಂಬಿಯಾಗಿ ಪರಿವರ್ತಿತವಾಗುತ್ತದೆ. ಮನಸ್ಸಿನ ನೊಣಸ್ವಭಾವ ಕಡಿಮೆಯಾಗಬೇಕಾದರೆ ನಾವು ವಿಷಯಸುಖಗಳಿಗಾಗಿ ಹಾತೊರೆಯುವುದನ್ನು ನಿಲ್ಲಿಸಬೇಕು. ನೊಣದಂತೆ ಇರದೆ, ದುಂಬಿಯಂತೆ ಇರಬೇಕು.

? ಮನಸ್ಸಿಗೆ ಯಾವುದು ಸರಿ, ಯಾವುದು ತಪ್ಪು, ಒಳ್ಳೆಯದು ಕೆಟ್ಟದ್ದು, ಮಾಡಬೇಕಾದುದು, ಮಾಡಬಾರದ್ದು ಎಂಬುದರ ಪೂರ್ಣ ಅರಿವಿದ್ದರೂ ಸಂಸ್ಕಾರವಶಾತ್ ತಪ್ಪುಗಳನ್ನು ಮಾಡುವಾಗ ಈ ಸರಿ–ತಪ್ಪುಗಳ ಅರಿವು ಬರುವುದೇ ಇಲ್ಲವಲ್ಲ. ಇದಕ್ಕೇನು ಪರಿಹಾರ?

— ಎನ್. ಚಂದ್ರಶೇಖರ್, ಮೈಸೂರು.

☆ ಮನಸ್ಸಿಗೆ ಸರಿ ತಪ್ಪುಗಳ ಪೂರ್ಣ ಅರಿವಿದ್ದರೆ ನಾವು ತಪ್ಪುಗಳನ್ನು ಮಾಡುವುದೇ ಇಲ್ಲ. ಈ ಅರಿವು ಮನಸ್ಸಿನ ಆಳಕ್ಕೆ ಇಳಿದು, ಬಲವಾದ ಸಂಸ್ಕಾರ ರೂಪವನ್ನು ತಾಳಬೇಕು. ಇತರ ಸಂಸ್ಕಾರಗಳೇ ಬಲವಾಗಿರುವುದರಿಂದ ನಾವು ತಪ್ಪು ಮಾಡುವಾಗ ಈ ಅರಿವು ಕೆಲಸ ಮಾಡುವುದಿಲ್ಲ. ಸಾಮಾನ್ಯವಾಗಿ ನಾವು ಏನಾದರೂ ತಪ್ಪು ಮಾಡುವುದು ಕಾಮ, ದ್ವೇಷ, ಕೋಪ ಮುಂತಾದ ಭಾವೋದ್ವೇಗಗಳಿಗೆ ವಶರಾದಾಗ. ಈ ನಿಷೇಧಾತ್ಮಕ ಭಾವಗಳು ನಮ್ಮ ಅರಿವನ್ನು ಮಂದಗೊಳಿಸುತ್ತವೆ. ನಾವು ಭಾವೋದ್ವೇಗಕ್ಕೆ ಒಳಗಾದಾಗ ಯಾವುದೇ ನಿರ್ಣಯಕ್ಕೆ ಬರಬಾರದು. ಭಾವಶಮನವಾದ ಸ್ಥಿತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಆಗಲೂ ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳುವುದರಲ್ಲಿ ನಮ್ಮ ಅಹಂಕಾರ ತಡೆಯಾಗುತ್ತದೆ. ಇಲ್ಲಿ ನಮ್ಮ ಸಹಾಯಕ್ಕೆ ಬರುವುದು ಉನ್ನತ ಆಧ್ಯಾತ್ಮಿಕ ಆದರ್ಶ. ಈ ಆದರ್ಶ ನಮ್ಮಲ್ಲಿ ಪ್ರಬಲವಾಗಿರಬೇಕು. ಈ ಆದರ್ಶದ ಬೆಳಕಿನಲ್ಲಿ ಯಾವುದು ಸರಿ. ಯಾವುದು ತಪ್ಪು ಎಂದು ನಿರ್ಣಯಿಸಬೇಕು. ಯಾವುದು ನಮ್ಮನ್ನು ಆದರ್ಶದ ಕಡೆಗೆ ಕರೆದುಕೊಂಡು ಹೋಗುವುದೋ ಅದು ಸರಿ, ಯಾವುದು ನಮ್ಮನ್ನು ಆದರ್ಶದಿಂದ ವಿಮುಖಗೊಳಿಸುವುದೊ ಅದು ತಪ್ಪು. ನಮ್ಮಲ್ಲಿ ಆದರ್ಶ ಪ್ರಬಲವಾಗಿದ್ದರೆ ಈ ಅರಿವೂ ಪ್ರಬಲವಾಗಿರುತ್ತದೆ. ಈ ಅರಿವಿನ ಸಸಿಗೆ ಆದರ್ಶದ ನೀರೆರೆದು ಬೆಳಸಬೇಕು. ಅರಿವು ಬರಿದಾದರೆ ಜೀವನ ಬರಡಾಗುತ್ತದೆ.

? ಇಂದೇಕೋ ಪ್ರಶಾಂತ ವಾತಾವರಣಕ್ಕಿಂತ 'ಅಶಾಂತ' ವಾತಾವರಣವೇ ಹೆಚ್ಚಾಗಿ ಕಾಣುತ್ತಿದೆ. ಈ ಮಾತನ್ನು ನೀವು ನಿಜ ಎನ್ನುವುದಾದರೆ, ಈ ಅಶಾಂತ ವಾತಾವರಣಕ್ಕೆ ಕಾರಣ ವೇನೆಂಬುದನ್ನು ಸ್ವಲ್ಪ ಬಿಡಿಸಿ ಹೇಳುವಿರಾ?

—ಶ್ರೀ ಶಂಕರೇಗೌಡ, ಮಂಡ್ಯ.

☆ ಮನಸ್ಸು ಅಶಾಂತವಾಗಿದ್ದರೆ ವಾತಾವರಣವೂ ಅಶಾಂತವಾಗುತ್ತದೆ. ಹೆಚ್ಚಿನ ಜನರ ಮನಸ್ಸು ಅಶಾಂತವಾಗಿರುವುದರಿಂದ ಎಲ್ಲೆಲ್ಲೂ ಅಶಾಂತ ವಾತಾವರಣವೇ ಕಂಡುಬರುತ್ತದೆ. ಪ್ರಶಾಂತತೆಯನ್ನು ನಾವು ಅಂತರಂಗದಲ್ಲಿ ಅರಸಲು ಪ್ರಯತ್ನಿಸಬೇಕು. ಹೊರಗಿನ ಅಶಾಂತಿಯನ್ನು ನೋಡಿ ಅಸಹನೆ

ಯುಂಟಾದರೆ ಒಳಗಿನ ಶಾಂತಿ ಕೆಡುತ್ತದೆ. ನಮ್ಮ ಒಳಗಿನ ಶಾಂತಿಯನ್ನು ನಾವು ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ವಾತಾವರಣವನ್ನು ಬದಲಾಯಿಸಲು ನಮ್ಮಿಂದಾಗದು. ನಮ್ಮನ್ನು ನಾವು ಬದಲಾಯಿಸಿಕೊಳ್ಳಲು ಪ್ರಯತ್ನಿಸೋಣ. ಹೊರಗಿನ ಅಶಾಂತಿ ಒಳಗಿನ ಪ್ರಶಾಂತಿಯನ್ನು ಕೆಡಿಸದಿರಲಿ.

**? ಜೀವನಮೌಲ್ಯಗಳಾದ ಪ್ರೀತಿ, ವಿಶ್ವಾಸ, ಆತ್ಮೀಯತೆ, ನಂಬಿಕೆ ಒಟ್ಟಾರೆ ಒಂದು ಹದದಲ್ಲಿರಬೇಕಾದ ಭಾವನಾತ್ಮಕ ಸಂಬಂಧಗಳೇ ಇಂದೇಕೋ ಇಲ್ಲವಾಗುತ್ತಿವೆ. ಇದ್ದರೂ, ಅವುಗಳು ತೇಪೆ ಹಚ್ಚಿದಂತೆ ಕಾಣುತ್ತಿವೆ. ಇದಕ್ಕೆ ಬಲವಾದ ಕಾರಣ ಏನು, ಸ್ವಲ್ಪ ವಿವರವಾಗಿ ತಿಳಿಸಿ?** *– ಶ್ರೀ ಶಂಕರೇಗೌಡ, ಮಂಡ್ಯ*

☆ ಮೌಲ್ಯಗಳ ಕುಸಿತಕ್ಕೆ ಮುಖ್ಯ ಕಾರಣ ವಾಣಿಜ್ಯ ಪ್ರವೃತ್ತಿ. ಇಂದು ಎಲ್ಲವನ್ನೂ ಕೊಂಡುಕೊಳ್ಳಬೇಕೆಂಬ ಪರಿಸ್ಥಿತಿ ಉಂಟಾಗಿದೆ. ಆದರೆ ಮೌಲ್ಯಗಳನ್ನು ಕೊಂಡುಕೊಳ್ಳಲಾಗದೇ ಇರುವುದರಿಂದ ಅವುಗಳ ಕೊರತೆ ಕಂಡುಬರುತ್ತದೆ. ಮೌಲ್ಯಗಳು ಅಂತರಂಗದ ಸಮೃದ್ಧಿಯಿಂದ ಹೊರಹೊಮ್ಮುವ ವಿಷಯ, ಹೊರಗಿನಿಂದ ಎರವಲು ಪಡೆಯುವ ವಿಷಯವಲ್ಲ. ಆಂತರಿಕ ಶ್ರೀಮಂತಿಕೆಯಿಂದ ಮಾತ್ರ ಮೌಲ್ಯಗಳನ್ನು ಪಡೆಯಬಹುದು, ಹೊರಗಿನ ಶ್ರೀಮಂತಿಕೆಯಿಂದಲ್ಲ. ಹೊರಗಿನ ಸಿರಿತನ, ಒಳಗಿನ ಬಡತನ, ಇದರಿಂದ ಮೌಲ್ಯಗಳ ಅಧಃಪತನ.

**? ಈ ಬದುಕಿನಲ್ಲಿ ಹೇಗಿರಬೇಕೆಂಬುದೇ ಒಂದು ದೊಡ್ಡ ಸಮಸ್ಯೆ ಈ ಸಮಸ್ಯೆ ಬಿಡಿಸುವಲ್ಲಿ ಒಮ್ಮೊಮ್ಮೆ ಮನಸ್ಸು ಗೊಂದಲದ ಗೂಡಾಗುತ್ತದೆ. ಈ ಗೊಂದಲದಿಂದ ಹೊರಬರಲು ಆಧ್ಯಾತ್ಮಿಕ ತಿಳಿವಿನ ಸಿಂಚನವೇನಾದರೂ ಇದ್ದರೆ ತಮ್ಮ ಕೃಪಾದೃಷ್ಟಿಯಿಂದ ನಮ್ಮತ್ತ ಸ್ವಲ್ಪ ಸಿಂಪಡಿಸುವಿರಾ?** *– ಶ್ರೀ ಶಂಕರೇಗೌಡ. ಮಂಡ್ಯ.*

☆ **ಸಹಜತೆ ಮತ್ತು ಸರಳತೆ** – ಇದೇ ಬದುಕಿನ ರಹಸ್ಯ. ನಾವು ಸಹಜವಾಗಿ, ಸರಳವಾಗಿ ಬಾಳುವುದನ್ನು ಕಲಿಯಬೇಕು. ಹೇಗಿರಬೇಕೆಂಬ ಚಿಂತೆಯೇ ಗೊಂದಲಕ್ಕೆ ಕಾರಣ. ಸಹಜ, ಸರಳ ಬದುಕೇ ಆಧ್ಯಾತ್ಮಿಕತೆ. ನಾವು ಅಧ್ಯಾತ್ಮದ ಕಡೆ ವಾಲಿದಷ್ಟೂ ಬದುಕು ಸಹಜವೂ, ಸರಳವೂ ಆಗುತ್ತದೆ. ಬದುಕು ಬಗೆಹರಿಯಲಾರದ ರಹಸ್ಯವಲ್ಲ, ಅದೊಂದು ಎದುರಿಸಬೇಕಾದ ಸವಾಲು. ವಿವೇಕಾನಂದರು ಹೇಳುವಂತೆ ಅದೊಂದು ಹೋರಾಟ, ಈ ಹೋರಾಟದಲ್ಲಿ ನಾವು ಸೋಲುತ್ತೇವೆಯೊ ಗೆಲ್ಲುತ್ತೇವೆಯೊ ಎಂಬುದು ಮುಖ್ಯವಲ್ಲ. ನಾವು ಹೋರಾಡುತ್ತ ಬೆಳೆಯುವುದು ಮುಖ್ಯ.

**? ಈ ಬದುಕಿನಲ್ಲಿ ಒಂದು ಸರಿಯಾದ ಮಾರ್ಗ ಇದ್ದೇ ಇದೆ. ಆದರೆ ಅದನ್ನು ಬದುಕಿನಲ್ಲಿ ತುಳಿಯುತ್ತಿದ್ದರೂ ಕೆಲವರು 'ಅದು ಸರಿಯಾದ ಮಾರ್ಗ ಅಲ್ಲ' ಎಂದು ದಾರಿ ತಪ್ಪಿಸಲು ಸತತ ಪ್ರಯತ್ನ ಮಾಡುತ್ತಾರಲ್ಲ. ಇಂತಹವರಿಂದ ದೂರವಿರಲು ನೀವು ಸೂಚಿಸುವ ಸರಳ ಮಾರ್ಗ ಯಾವುದು?**

*– ಶ್ರೀ ಶಂಕರೇಗೌಡ, ಮಂಡ್ಯ*

☆ ಹಿರಿಯರ ಮಾರ್ಗವನ್ನು ಅನುಸರಿಸಬೇಕು. ಮಹಾತ್ಮರು ಯಾವ ಮಾರ್ಗವನ್ನು ತೋರಿಸಿರುವರೋ ಅವುಗಳಲ್ಲಿ ನಿಮಗೆ ಯಾವುದು ಸರಿ ಎನಿಸುತ್ತದೆಯೋ ಅದನ್ನು ಅನುಸರಿಸಿ. ಈ ಸಮಾಜದಲ್ಲಿ ಹಾದಿ ತಪ್ಪಿಸುವವರು ಅನೇಕರಿರುತ್ತಾರೆ. ಎಲ್ಲರ ಮಾತನ್ನು ಕೇಳುತ್ತ ಇದ್ದರೆ ಏನನ್ನೂ ಸಾಧಿಸಲಾಗುವುದಿಲ್ಲ. ಯಾರು ಏನೇ ಹೇಳಿದರೂ ಸುಮ್ಮನೆ ತಲೆದೂಗಿಸಿ, ನಮ್ಮ ದಾರಿಯನ್ನು ನಾವು ಹಿಡಿಯಬೇಕು. ಅವರನ್ನು ವಿರೋಧಿಸಲೂ ಬಾರದು, ಅವರ ಮಾತಿಗೆ ಕಿವಿಗೊಡಲೂ ಬಾರದು. ಅವರವರ ದಾರಿ ಅವರವರಿಗೆ. ನಮ್ಮ ಆದರ್ಶದಲ್ಲಿ ನಾವು ಸ್ಥಿರವಾಗಿ ನಿಲ್ಲಬೇಕು. ಆಗ ಬೇರೆಯವರು ನಮ್ಮನ್ನು ದಾರಿತಪ್ಪಿಸಲಾರರು. ಹುಲ್ಲಿನಂತೆ ವಿನಮ್ರತೆ ಇರಬೇಕು. ಅದು ಗಾಳಿ ಬೀಸಿದಂತೆ ಅಲ್ಲಾಡುತ್ತದೆ. ಆದರೆ ತನ್ನ ನೆಲೆಯಿಂದ ಜಾರಿ ಬೀಳುವುದಿಲ್ಲ. ನಮ್ಮ ಅಹಂಕಾರವು ಮರದಂತೆ ಎತ್ತರವಾಗಿ ಬೆಳೆದಿದ್ದರೆ ಜೋರಾಗಿ ಗಾಳಿ ಬೀಸಿದಾಗ ಉರುಳಿಬೀಳುವ ಸಾಧ್ಯತೆ ಅಧಿಕ.

**ಉತ್ತರಗಳನ್ನು ನೀಡಿದವರು :** ಸ್ವಾಮಿ ನಿತ್ಯಸ್ಥಾನಂದಜಿ, ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಮೈಸೂರು

## " ನಾನು ಗದಾಧರ "



ಸ್ವಾಮಿ ಅದ್ವೈತಾನಂದರು ಪ್ರಾಣ ಬಿಡುವುದಕ್ಕೆ ಮುಂಚೆ ಬಹಳ ಅಸ್ವಸ್ಥರಾಗಿದ್ದರು. ಒಂದು ದಿನ ಅವರು ಶ್ರೀರಾಮಕೃಷ್ಣರ ಭಾವಚಿತ್ರದ ಮುಂದೆ ನಿಂತು "ಗುರುದೇವ, ನನ್ನನ್ನು ಈ ನೋವಿನಿಂದ ಪಾರು ಮಾಡಿ" ಎಂದು ಪ್ರಾರ್ಥಿಸಿದರು. ಶ್ರೀರಾಮಕೃಷ್ಣರಿಗೆ ತಮ್ಮ ಈ ವೃದ್ಧ ಶಿಷ್ಯನ ಪ್ರಾರ್ಥನೆ ಕೇಳಿಸಿರಬೇಕು. ಅನಂತರ ಸ್ವಾಮಿ ಪ್ರೇಮಾನಂದರು ಹೀಗೆಂದರು: "ಸಾಯುವುದಕ್ಕೆ ಮುಂಚೆ ಗೋಪಾಲ್–ದಾ ಶ್ರೀರಾಮಕೃಷ್ಣರು ಭುಜದ ಮೇಲೆ ಗದೆಯನ್ನು ಹೊತ್ತುಕೊಂಡಿರುವುದನ್ನು ನೋಡಿದರು. ಹಾಗೆ ನೋಡಿ 'ಗುರುವೆ, ನೀವೇಕೆ ಭುಜದ ಮೇಲೆ ಗದೆಯನ್ನು ಹೊತ್ತುಕೊಂಡಿರುವಿರಿ?' ಎಂದು ಪ್ರಶ್ನಿಸಿದರು. ಶ್ರೀರಾಮಕೃಷ್ಣರು "ನಾನು ಗದಾಧರ. ಈ ಯುಗದಲ್ಲಿ ನಾನು ಪ್ರತಿಯೊಂದನ್ನೂ ನಾಶಪಡಿಸಿ ಅನಂತರ ಎಲ್ಲವನ್ನೂ ಪುನರ್ನಿರ್ಮಾಣ ಮಾಡುತ್ತೇನೆ" ಎಂದು ಉತ್ತರ ಕೊಟ್ಟರು". ಸತ್ಯವಾಗಿಯೂ ಶ್ರೀರಾಮಕೃಷ್ಣರು ಈ ಯುಗದಲ್ಲಿ ಜನರ ಮನಸ್ಸಿನಿಂದ ಸಂಶಯ ಭ್ರಮೆಗಳನ್ನು ನಾಶಪಡಿಸುವುದಕ್ಕಾಗಿಯೇ ಹುಟ್ಟಿದರು.